**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक-संस्कृत-विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಪ್ರ.ಸ./2017-18/447-16

ದಿನಾಂಕ: 16.01.2019

ಮಾನ್ಯರೇ,

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ನಲವತ್ತೊಂಬತ್ತನೆಯ** ಸಭೆಯು ದಿನಾಂಕ: **08.01.2019ರ ಮಂಗಳವಾರ ಪೂರ್ವಾಹ್ನ 11.00 ಗಂಟೆಗೆ** ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳು ವಹಿಸಿದ್ದರು. ಈ ಪತ್ರದೊಂದಿಗೆ ಆ ದಿನ ನಡೆದ ಸಭೆಯ ನಡಾವಳಿಯನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಡಲಾಗಿದೆ.

ಈ ಸಭೆಯ ನಡಾವಳಿಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರ ತಲುಪಿದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

I/c ಕುಲಸಚಿವರು
ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು – 560018.

ಇವರಿಗೆ,

1. **ಶ್ರೀಮತಿ ಸುಜಾತ ಗೌಡ,** # 30, 7ನೇ ಹಂತ, 2ನೇ ಮುಖ್ಯರಸ್ತೆ, ಬಿ.ಇ.ಎಂ.ಎಲ್. ಲೇಔಟ್, ಮೈಲಸಂದ್ರ, ಕೆಂಗೇರಿ, ಬೆಂಗಳೂರು – 560059.
2. **ಶ್ರೀ ಶಿವಕುಮಾರ್ ಎನ್.,** # 109, 2ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಪಾಂಡುರಂಗ ಬಡಾವಣೆ, ಅರಕೆರೆ ಗೇಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560076.
3. **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು–560001
4. **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ವಿಧಾನಸೌಧ, ಬೆಂಗಳೂರು–560001
5. **ಸರ್ಕಾರದ ಕಾರ್ಯದರ್ಶಿ,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು–560001
6. **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈಋತ್ಯ ಪ್ರಾದೇಶಿಕ ಕೇಂದ್ರ, ಪ್ರಸನ್ನಕುಮಾರ್ ಬ್ಲಾಕ್, ಅರಮನೆ ರಸ್ತೆ, ಬೆಂಗಳೂರು–09,
7. **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು–570001.
8. **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002.
9. **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001
10. **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ ಬೆಂಗಳೂರು–560001
11. **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012
12. **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009
13. **ಆಯುಕ್ತರು,** ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001

**ಪ್ರತಿಗಳು:**

1. **ಘನತೆವೆತ್ತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು,** ರಾಜಭವನ, ಬೆಂಗಳೂರು – 560001
2. **ಮಾನ್ಯ ಕುಲಪತಿಯವರ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
3. ಕಛೇರಿ ಪ್ರತಿ
4. ರಕ್ಷಾ ಪ್ರತಿ

ದೂರವಾಣಿ: 080 – 26701303 / 26705387; ಇ-ಮೇಲ್: karnatakasanskrituniversity@gmail.com

## 08.01.2019ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) 49ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ 49ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಜನವರಿ 08 ಮಂಗಳವಾರ ಪೂರ್ವಾಹ್ನ 11.30** ಗಂಟೆಗೆ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | |
|---|---|
| ೧. **ಪ್ರೊ. ಪದ್ಮಾಶೇಖರ್**, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. **ಶ್ರೀಮತಿ ಸುಜಾತ ಗೌಡ**, ಬೆಂಗಳೂರು | ಸದಸ್ಯರು |
| ೩. **ಶ್ರೀ ಶಿವಕುಮಾರ್ ಎನ್.**, ಬೆಂಗಳೂರು | ಸದಸ್ಯರು |
| ೪. **ನಿರ್ದೇಶಕರು**, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001 | ಸದಸ್ಯರು |
| ೫. **ನಿರ್ದೇಶಕರು**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| – ಪರವಾಗಿ **ಶ್ರೀಮತಿ ಕಾವ್ಯಶ್ರೀ ಎಂ**, ಸಹಾಯಕ ನಿರ್ದೇಶಕರು | ಸದಸ್ಯರು |
| ೬. **ಪ್ರೊ. ವಿ ಗಿರೀಶ್ ಚಂದ್ರ**, ಕುಲಸಚಿವರು, (ಪ್ರಭಾರ) | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | |
|---|---|
| ೧. **ಅಪರ ಮುಖ್ಯ ಕಾರ್ಯದರ್ಶಿಗಳು**, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೨. **ಉಪ ಕಾರ್ಯದರ್ಶಿಗಳು**, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೩. **ಕಾರ್ಯದರ್ಶಿಗಳು**, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. **ಪ್ರಾದೇಶಿಕ ನಿರ್ದೇಶಕರು**, ಯುಜಿಸಿ-ನೈಋತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು-09 | ಸದಸ್ಯರು |
| ೫. **ಆಯುಕ್ತರು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. **ಆಯುಕ್ತರು**, ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು-560001 | ಸದಸ್ಯರು |
| ೭. **ನಿರ್ದೇಶಕರು**, ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು-560001 | ಸದಸ್ಯರು |
| ೮. **ನಿರ್ದೇಶಕರು**, ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು-560012 | ಸದಸ್ಯರು |
| ೯. **ನಿರ್ದೇಶಕರು**, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು-560009 | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಂಡಿತವಾಗಿ ನಿರ್ಣಯಗೊಂಡವು.

## 2019ರ ಜನವರಿ 08ರಂದು ನಡೆಯುವ ಪ್ರಶಾಸನ ಸಮಿತಿ (ಸಿಂಡಿಕೇಟ್) 49ನೇ ಸಭೆಯ ಕಾರ್ಯಸೂಚಿ

| ವಿ.ಸಂ. | ವಿಷಯ ಮತ್ತು ಟಿಪ್ಪಣಿ |
|---|---|
| ವಿಷಯ 01 | **ಪ್ರಶಾಸನ ಸಮಿತಿ 48ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 48ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 27.10.2018ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **48ನೇ ಪ್ರಶಾಸನ ಸಮಿತಿಯ ಅನುಪಾಲನಾ ವರದಿಯನ್ನು ಅನುಮೋದಿಸಲಾಯಿತು.** |
| ವಿಷಯ 02 | **'ಹಣಕಾಸು ಸಮಿತಿ' 31ನೇ ಸಭೆಯ ನಡಾವಳಿಗಳನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಹಣಕಾಸು ಸಮಿತಿ' 31ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 22.11.2018ರಂದು ನಡೆಯಿತು. ಆ ಸಭೆಯ ನಡಾವಳಿಗಳನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |

| | |
|---|---|
| ನಿರ್ಣಯ | **'ಹಣಕಾಸು ಸಮಿತಿ' 31ನೇ ಸಭೆಯ ನಡಾವಳಿಗಳನ್ನು ಅನುಮೋದಿಸಲಾಯಿತು.** |
| ವಿಷಯ 03 | **'ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಹಾಗೂ ಸಂಶೋಧನ ಕೇಂದ್ರ'ವನ್ನು ಆರಂಭಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ 'ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಹಾಗೂ ಸಂಶೋಧನ ಕೇಂದ್ರ'ವನ್ನು ಪ್ರಾರಂಭಿಸುವಂತೆ ಹಾಗೂ ಸದರಿ ಅಧ್ಯಯನ ಕೇಂದ್ರಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ, ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ ಕಾರ್ಯಕ್ರಮಗಳ ಉಸ್ತುವಾರಿ ಸಮಿತಿಯ ವತಿಯಿಂದ ಸಹಕಾರವನ್ನು ದೊರಕಿಸಿಕೊಡಲು ಪ್ರಯತ್ನಿಸುವುದಾಗಿ ಸಮಿತಿಯ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ಕುಲಪತಿಗಳಿಗೆ ಪತ್ರವನ್ನು ಬರೆದಿರುತ್ತಾರೆ. ಈ ಹಿನ್ನೆಲೆಯಲ್ಲಿ, ಸರ್ಕಾರದ ಸಹಕಾರದೊಂದಿಗೆ ವಿಶ್ವವಿದ್ಯಾಲಯದಲ್ಲಿ 'ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಹಾಗೂ ಸಂಶೋಧನ ಕೇಂದ್ರ'ವನ್ನು ಪ್ರಾರಂಭಿಸಬಹುದಾಗಿದ್ದು, ಪ್ರಶಾಸನ ಸಮಿತಿಯ ಅನುಮೋದನೆಗಾಗಿ ವಿಷಯ ಮಂಡಿಸಿದೆ. |
| ನಿರ್ಣಯ | **'ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಹಾಗೂ ಸಂಶೋಧನ ಕೇಂದ್ರ'ವನ್ನು ಪ್ರಾರಂಭಿಸುವುದು ಅವಶ್ಯಕವೆಂದು ಪ್ರಶಾಸನ ಸಮಿತಿಯು ಅಭಿಪ್ರಾಯಪಟ್ಟಿತು ಮತ್ತು ಸಂಶೋಧನಾ ಕೇಂದ್ರ ಸ್ಥಾಪಿಸಲು ಅನುಮತಿ ನೀಡಿತು.** |
| ವಿಷಯ 04 | **ಏಳನೇ ದೀಕ್ಷಾಂತ ಘಟಿಕೋತ್ಸವವನ್ನು ನಡೆಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಏಳನೇ ದೀಕ್ಷಾಂತ ಘಟಿಕೋತ್ಸವವನ್ನು ದಿನಾಂಕ: 31.01.2019ರ ಗುರುವಾರ ನಡೆಸಲು ಘನತೆವೆತ್ತ ರಾಜ್ಯಪಾಲರು ಹಾಗೂ ವಿಶ್ವವಿದ್ಯಾಲಯದ ಕುಲಾಧಿಪತಿಗಳು ದಿನಾಂಕವನ್ನು ನಿಗದಿಪಡಿಸಿ ಒಪ್ಪಿಗೆಯನ್ನು ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ ಏಳನೇ ದೀಕ್ಷಾಂತ ಘಟಿಕೋತ್ಸವವನ್ನು ನಡೆಸಲು ಎಲ್ಲ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದ್ದು, ಈ ಕಾರ್ಯಕ್ರಮದ ವೆಚ್ಚಕ್ಕೆ ರೂ. 6.00 ಲಕ್ಷಗಳನ್ನು ಅಂದಾಜಿಸಲಾಗಿದೆ. ಪ್ರಶಾಸನ ಸಮಿತಿಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಏಳನೇ ದೀಕ್ಷಾಂತ ಘಟಿಕೋತ್ಸವವನ್ನು ನಡೆಸಲು ಪ್ರಶಾಸನ ಸಮಿತಿಯು ಒಪ್ಪಿಗೆ ನೀಡಿತು.** |
| ವಿಷಯ 05 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಗೌರವ ಡಿ.ಲಿಟ್' ಪದವಿಗೆ ವಿದ್ವಾಂಸರ ಹೆಸರನ್ನು ಸೂಚಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಏಳನೇ ದೀಕ್ಷಾಂತ ಘಟಿಕೋತ್ಸವವನ್ನು ನಡೆಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಪ್ರತಿ ವರ್ಷದಂತೆ, ವಿಶ್ವವಿದ್ಯಾಲಯದ 'ಗೌರವ ಡಿ.ಲಿಟ್.' ಪದವಿಯನ್ನು ನೀಡಲು ನಿರ್ಣಯಿಸಿದ್ದು, ಕರ್ನಾಟಕ ರಾಜ್ಯಪಾಲರ ಸಚಿವಾಲಯದ ಸುತ್ತೋಲೆ 'ಸಂಖ್ಯೆ: ಜಿಎಸ್ 02 ಜಿಯುಎಂ 2016; ದಿನಾಂಕ: 18.02.2016'ರ ಸೂಚನೆಗಳನ್ವಯ ಕ್ರಮವಹಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ ಏಳನೇ ದೀಕ್ಷಾಂತ ಘಟಿಕೋತ್ಸವದಲ್ಲಿ ನೀಡಲಾಗುವ 'ಗೌರವ ಡಿ.ಲಿಟ್.' ಪದವಿಗೆ ಅರ್ಹ/ಹಿರಿಯ ವಿದ್ವಾಂಸರ ಹೆಸರುಗಳನ್ನು ಸ್ವವಿವರಗಳೊಂದಿಗೆ ಅನುಮೋದಿಸಲು ಪ್ರಶಾಸನ ಸಮಿತಿಯನ್ನು ಕೋರಿದೆ.<br>'ಗೌರವ ಡಿ.ಲಿಟ್.' ಪದವಿಗಾಗಿ ಕೆಳಕಂಡ ವಿದ್ವಾಂಸರ ಸ್ವವಿವರಗಳು ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾಗಿವೆ:<br>1. **ಪ್ರೊ. ಕೆ.ಈ. ರಾಧಾಕೃಷ್ಣ, ಬೆಂಗಳೂರು**<br>2. **ಶ್ರೀ ಶ್ರೀ ಶ್ರೀ ಡಾ. ಶಿವಾನಂದಭಾರತೀ ಮಹಾಸ್ವಾಮಿಗಳು, ಇಂಚಲ**<br>3. **ಪಂಡಿತ್ ಜಯತೀರ್ಥಾಚಾರ್ಯ ವಾ. ಮಳಗಿ, ಧಾರವಾಡ**<br>4. **ಷ.ಬ್ರ.ಶ್ರೀ.ಶ್ರೀ. ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ದಾವಣಗೆರೆ ಜಿಲ್ಲೆ**<br>5. **ಪ್ರೊ. ಡಿ.ಟಿ. ರಂಗಸ್ವಾಮಿ, ಚಿತ್ರದುರ್ಗ**<br>'ಗೌರವ ಡಿ.ಲಿಟ್' ಪದವಿಗಾಗಿ ಈ ಹಿಂದೆ ಪ್ರಶಾಸನ ಸಮಿತಿ ಮತ್ತು ಪ್ರಶಿಕ್ಷಣ ಪರಿಷತ್ ಸದಸ್ಯರು ಸೂಚಿಸಿದ್ದ ವಿದ್ವಾಂಸರ ಪಟ್ಟಿಯು ಕೆಳಗಿನಂತಿದ್ದು, ಈ ವಿದ್ವಾಂಸರ ಹೆಸರುಗಳನ್ನೂ ಕೂಡ ಈ ಸಾಲಿನ ಗೌರವ ಡಿ.ಲಿಟ್. ಪದವಿಗೆ ಪರಿಗಣಿಸಬಹುದಾಗಿದೆ.<br>1. **ಶ್ರೀಮತಿ ಲಲಿತಾಂಬ ಚಂದ್ರಶೇಖರ್**<br>2. **ಡಾ. ಎಂ.ಎ. ಲಕ್ಷ್ಮೀತಾತಾಚಾರ್, ಮೇಲುಕೋಟೆ**<br>3. **ಡಾ. ಎಸ್.ಆರ್. ಲೀಲಾ, ಬೆಂಗಳೂರು**<br>4. **ವಿದ್ವಾನ್ ಸದಾಶಿವಶಾಸ್ತ್ರೀಗಳು**<br>5. **ಶ್ರೀ ಸಿದ್ದೇಶ್ವರ ಸ್ವಾಮೀಜಿ, ಬಿಜಾಪುರ**<br>6. **ಪ್ರೊ. ಐ.ಜಿ. ಸನದಿ, ಧಾರವಾಡ**<br>7. **ಮಹಾಮಹೋಪಾಧ್ಯಾಯ ವೆಂಕಟನಾಥನ್, ಮೈಸೂರು**<br>8. **ಬೊಂತೇ ಸ್ವಾಮೀಜಿ**<br>9. **ಶತಾವಧಾನಿ ಡಾ. ರಾ. ಗಣೇಶ್, ಬೆಂಗಳೂರು** |

| | |
|---|---|
| | 10. ಡಾ. ಚೂಡಾಮಣಿ ನಂದಗೋಪಾಲ್, ಬೆಂಗಳೂರು<br>11. ಪ್ರೊ. ಎನ್.ಟಿ. ಶ್ರೀನಿವಾಸ ಅಯ್ಯಂಗಾರ್, ಬೆಂಗಳೂರು<br>12. ಡಾ. ಕೆಳದಿ ಗುಂಡಾ ಜೋಯಿಸ್, ಕೆಳದಿ<br>13. ಪ್ರೊ. ಕೆ. ರಾಜಗೋಪಾಲಾಚಾರ್ಯ<br>14. ಪ್ರೊ. ಕೆ. ಸೂರ್ಯನಾರಾಯಣರಾವ್<br>15. ಪ್ರೊ. ಹಯವದನ ಪುರಾಣಿಕ್<br>16. ಶ್ರೀ ಹೆಚ್. ಹನುಮಂತರಾಯ<br>17. ಶ್ರೀ ಷಣ್ಮುಖಯ್ಯ ಅಕ್ಕೂರಮಠ<br>18. ಡಾ. ಶ್ರೀ ಶ್ರೀ ಶ್ರೀ ಶಾಂತವೀರ ಮಹಾಸ್ವಾಮೀಜಿಯವರು, ಕೊಳದಮಠ ಮಹಾಸಂಸ್ಥಾನ, ಬೆಂಗಳೂರು<br>19. ಶ್ರೀ ಶ್ರೀ ಪ್ರಕಾಶನಾಥ ಸ್ವಾಮೀಜಿ, ಶ್ರೀ ಆದಿಚುಂಚನಗಿರಿ ಶಾಖಾಮಠ, ಬೆಂಗಳೂರು |
| ನಿರ್ಣಯ | ಪ್ರಶಾಸನ ಸಮಿತಿಯು ಒಪ್ಪಿಗೆ ಸೂಚಿಸಿತು. |
| ವಿಷಯ 06 | **ಶ್ರೀ ಶರಣ ಬಸವೇಶ್ವರ ಸಂಸ್ಕೃತ ಪಾಠಶಾಲೆ, ಮುಶಿಗೇರಿ, ರೋಣ ತಾ॥ ಗದಗ ಜಿಲ್ಲೆ –ಈ ಪಾಠಶಾಲೆಯಲ್ಲಿ ವಯೋನಿವೃತ್ತಿಯಿಂದ ಖಾಲಿ ಇರುವ ಹುದ್ದೆಯನ್ನು ವೇತನಸಹಿತವಾಗಿ ಭರ್ತಿ ಮಾಡುವ ಬಗೆಗೆ.**<br>ಶ್ರೀ ಶಂಕರ ಶಿವಾಚಾರ್ಯ ಎಜುಕೇಷನ್ ಅಂಡ್ ಕಲ್ಚರಲ್ ಸೊಸೈಟಿ, ಬೇಲೂರ ತಾಲ್ಲೂಕು, ವಿಜಯಪುರ ಜಿಲ್ಲೆ – ಈ ಆಡಳಿತ ಮಂಡಳಿಯ ವತಿಯಿಂದ ನಡೆಯುತ್ತಿರುವ ಶ್ರೀ ಶರಣ ಬಸವೇಶ್ವರ ಸಂಸ್ಕೃತ ಪಾಠಶಾಲೆ, ಮುಶಿಗೇರಿ, ರೋಣ ತಾಲ್ಲೂಕು, ಗದಗ ಜಿಲ್ಲೆ –ಈ ಪಾಠಶಾಲೆಯು 1991–92ನೇ ಸಾಲಿನಲ್ಲಿ ಪ್ರಾರಂಭವಾಗಿ ಸತತವಾಗಿ ನಡೆಸಿಕೊಂಡು ಬಂದ ಶಾಲೆಯಾಗಿದ್ದು, ಸರ್ಕಾರಿ ಆದೇಶ ಸಂಖ್ಯೆ: ಇಡಿ 527 ಯುಎನ್ಇ 2015, ದಿನಾಂಕ: 06.02.2018ರಂದು ಅನುದಾನಕ್ಕೊಳಪಟ್ಟಿದೆ. ಈ ಪಾಠಶಾಲೆಯಲ್ಲಿ ಪ್ರಾರಂಭದಿಂದಲೂ ಸೇವೆ ಸಲ್ಲಿಸುತ್ತಿದ್ದ ಶ್ರೀ ಎಸ್.ಎಸ್. ಡೊಳ್ಳಿನ ಇವರ ನೇಮಕಾತಿಯನ್ನು ದಿನಾಂಕ: 19.04.2018ರಂದು ಅನುದಾನಸಹಿತ ಅನುಮೋದಿಸಲಾಗಿದೆ. ಇವರು ದಿನಾಂಕ: 31.07.2018ರಂದು ವಯೋನಿವೃತ್ತಿ ಹೊಂದಿದ್ದು, ಕೇವಲ 3 ತಿಂಗಳು 12 ದಿನಗಳು ಮಾತ್ರ ಅನುದಾನಸಹಿತವಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ. 2018–19ನೇ ಸಾಲಿನಲ್ಲಿ ವೇತನಸಹಿತ ಅನುಮೋದನೆಗೊಂಡು, 2018–19ನೇ ಸಾಲಿನಲ್ಲಿಯೇ ನಿವೃತ್ತಿ ಹೊಂದಿರುವುದರಿಂದ ಖಾಲಿ ಇರುವ ಹುದ್ದೆಯನ್ನು ವೇತನಸಹಿತವಾಗಿ ಭರ್ತಿ ಮಾಡಿಕೊಳ್ಳಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಈ ಹಿಂದೆ ಈ ರೀತಿಯ ಯಾವುದಾದರೂ ನೇರ ನೇಮಕಾತಿಯ ಸಂದರ್ಭದಲ್ಲಿ ವಿಶ್ವವಿದ್ಯಾಲಯ ನೀಡಿರುವ ಆದೇಶಗಳಿದ್ದಲ್ಲಿ ಆ ಆದೇಶಗಳನ್ನು ಗಮನಿಸಿ ಅದರಂತೆ ಅನುದಾನ ಸಹಿತ ನೇಮಕಾತಿ ಮಾಡಿಕೊಳ್ಳಲು ಪ್ರಶಾಸನ ಸಮಿತಿಯು ಸೂಚಿಸಿತು. |
| ವಿಷಯ 07 | **ಶ್ರೀ ವೆಂಕಟೇಶ ವಿ., ಸಹಾಯಕ ಕುಲಸಚಿವರು, ಕ.ಸಂ.ವಿ. –ಇವರನ್ನು ವಿಶ್ವವಿದ್ಯಾಲಯದ 'ಉಪ ಹಣಕಾಸು ಅಧಿಕಾರಿ' ಹುದ್ದೆಯಲ್ಲಿ ಅಧಿಕ ಪ್ರಭಾರದಲ್ಲಿರಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'Statutes governing the Cadre and Recruitment of the Employees of Karnataka Samskrit University'ದಲ್ಲಿ 'ಉಪ ಹಣಕಾಸು ಅಧಿಕಾರಿ'ಯ ಹುದ್ದೆಯು ಇದ್ದು, ಇದುವರೆವಿಗೂ ಈ ಹುದ್ದೆಯು ಖಾಲಿ ಇರುತ್ತದೆ. ವಿಶ್ವವಿದ್ಯಾಲಯದಲ್ಲಿನ ಹಣಕಾಸು ವಿಷಯಗಳಿಗೆ ಸಂಬಂಧಪಟ್ಟ ವ್ಯವಹಾರಗಳು ವರ್ಷವರ್ಷವೂ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಹಣಕಾಸು ವ್ಯವಹಾರಗಳ ಸುಗಮ ನಿರ್ವಹಣೆಗಾಗಿ ಹಣಕಾಸು ಅಧಿಕಾರಿಗಳಿಗೆ ಸಹಾಯಕರಾಗಿ ಉಪ ಹಣಕಾಸು ಅಧಿಕಾರಿಗಳನ್ನು ನಿಯೋಜಿಸುವ ಅವಶ್ಯಕತೆಯಿರುತ್ತದೆ. ಹಾಗಾಗಿ, ಈ ಹುದ್ದೆಯ ಸಮಾನ ಶ್ರೇಣಿಯ ಹುದ್ದೆಯಾದ ಸಹಾಯಕ ಕುಲಸಚಿವರು ಹುದ್ದೆಗೆ ನೇಮಕಗೊಂಡು ಕರ್ತವ್ಯನಿರ್ವಹಿಸುತ್ತಿರುವ ಶ್ರೀ ವೆಂಕಟೇಶ ವಿ.–ಇವರನ್ನು 'ಉಪ ಹಣಕಾಸು ಅಧಿಕಾರಿ' ಹುದ್ದೆಯಲ್ಲಿ ಅಧಿಕ ಪ್ರಭಾರದಲ್ಲಿರಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. |
| ನಿರ್ಣಯ | ಶ್ರೀ ವೆಂಕಟೇಶ ವಿ.–ಇವರನ್ನು 'ಉಪ ಹಣಕಾಸು ಅಧಿಕಾರಿ' ಹುದ್ದೆಯಲ್ಲಿ ಅಧಿಕ ಪ್ರಭಾರದಲ್ಲಿರಿಸುವ ಬಗ್ಗೆ ಸರ್ಕಾರದ ಅನುಮೋದನೆ ಪಡೆದು ನಂತರ ಕ್ರಮ ವಹಿಸಲು ಪ್ರಶಾಸನ ಸಮಿತಿಯು ಸೂಚಿಸಿತು. |
| ವಿಷಯ 08 | **'ಕರ್ನಾಟಕ ಸಾರಸ್ವತೋಪಾಸಕರು' ಮಾಲಿಕೆಯ ಕೃತಿಗಳನ್ನು ರಚಿಸಲು ವಿಶ್ವವಿದ್ಯಾಲಯದ ಯೋಜನಾ ಸಹಾಯಕರನ್ನು ನಿಯೋಜಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 'ಕರ್ನಾಟಕ ಸಾರಸ್ವತೋಪಾಸಕರು' ಮಾಲಿಕೆ ಅಡಿಯಲ್ಲಿ 107 ವಿದ್ವಾಂಸರ ಕೃತಿಗಳನ್ನು ಹೊರತರಲು ನಿರ್ಣಯಿಸಿದೆ. ಈಗಾಗಲೇ ಈ ಮಾಲಿಕೆಯಡಿಯಲ್ಲಿ 06 ಕೃತಿಗಳನ್ನು ಪ್ರಕಟಿಸಲಾಗಿದೆ. ಈ ಮಾಲಿಕೆಯಡಿ ಪ್ರಕಟಿಸಲು ಯೋಜಿಸಿರುವ ವಿದ್ವಾಂಸರ ಕೃತಿಗಳನ್ನು ಸಿದ್ಧಪಡಿಸಲು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಆಸಕ್ತ ಯೋಜನಾ ಸಹಾಯಕರನ್ನು ನಿಯೋಜಿಸಬಹುದಾಗಿದೆ. |

| | | | |
|---|---|---|---|
| | ಕ್ರ.ಸಂ. | ಕೃತಿಯ ಹೆಸರು | ಯೋಜನಾ ಸಹಾಯಕರ ಹೆಸರು |
| | 01. | ವಿದ್ವಾನ್ ಸಾಣೂರು ಭೀಮಭಟ್ಟರು | ಡಾ. ಉದಯನ ಹೆಗಡೆ |
| | 02. | 1. ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು<br>2. ಪಂಡಿತ್ ಭಾಲಚಂದ್ರಶಾಸ್ತ್ರೀ ನಾಗೇಶಶಾಸ್ತ್ರೀ ಉಪ್ಪಿನ ಬೆಟಗೇರಿ ಜೋಶಿ | ಡಾ. ಶ್ರುತಿ ಹೆಚ್.ಕೆ. ಮತ್ತು<br>ವಿದ್ವಾನ್ ತಿಮ್ಮಣ್ಣ ಆರ್. |
| | 03. | ಮಹರ್ಷಿ ದೈವರಾತರು, ಗೋಕರ್ಣ | ವಿದುಷಿ ಶಕುಂತಲಾ ಭಟ್ |
| ನಿರ್ಣಯ | **'ಕರ್ನಾಟಕ ಸಾರಸ್ವತೋಪಾಸಕರು' ಯೋಜನೆಗೆ ಯೋಜನಾ ಸಹಾಯಕರನ್ನು ನಿಯೋಜಿಸಲು ಸಭೆಯು ಒಮ್ಮತದಿಂದ ಒಪ್ಪಿಗೆ ನೀಡಿತು. ಸುಮಾರು 6 ತಿಂಗಳ ಕಾಲಾವಧಿ ನೀಡಲು ಸಭೆಯು ಸಮ್ಮತಿಸಿತು.** | | |
| ವಿಷಯ 09 | **ರಾಜ್ಯಮಟ್ಟದ ಸ್ಪರ್ಧೆಗಳನ್ನು ನಡೆಸಲು ತಗುಲಿದ ವೆಚ್ಚಕ್ಕೆ ಅನುಮೋದನೆ ನೀಡುವ ಬಗೆಗೆ.**<br>ಪ್ರತಿ ವರ್ಷದಂತೆಯೇ 2018-19ನೇ ಸಾಲಿನಲ್ಲಿ ರಾಜ್ಯಮಟ್ಟದ ಪ್ರತಿಯೋಗಿತಾ ಮತ್ತು ಶಲಾಕಾ ಸ್ಪರ್ಧೆಗಳನ್ನು ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಸಂಸತ್ ಆವರಣದಲ್ಲಿ ದಿನಾಂಕ: 19.12.2018 ಮತ್ತು 20.12.2018ರಂದು ನಡೆಸಲಾಯಿತು. ಈ ಸ್ಪರ್ಧೆಗಳನ್ನು ನಡೆಸಲು ರೂ. 6.00 ಲಕ್ಷಗಳ ಅಂದಾಜು ವೆಚ್ಚಕ್ಕೆ ದಿನಾಂಕ: 27.10.2018ರಂದು ನಡೆದ ಪ್ರಶಾಸನ ಸಮಿತಿ 48ನೇ ಸಭೆಯಲ್ಲಿ ಅನುಮತಿಯನ್ನು ಪಡೆಯಲಾಗಿತ್ತು. ರಾಜ್ಯಮಟ್ಟದ ಸ್ಪರ್ಧೆಗಳಿಗಾಗಿ ಒಟ್ಟಾರೆಯಾಗಿ ರೂ. 4,12,650/- (ನಾಲ್ಕು ಲಕ್ಷದ ಹನ್ನೆರಡು ಸಾವಿರದ ಆರುನೂರ ಐವತ್ತು ರೂಪಾಯಿ ಮಾತ್ರ)ಗಳು ವೆಚ್ಚವಾಗಿದ್ದು, ಈ ಮೊತ್ತಕ್ಕೆ ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | | |
| ನಿರ್ಣಯ | **ರಾಜ್ಯಮಟ್ಟದ ಸ್ಪರ್ಧೆಗಳನ್ನು ನಡೆಸಲು ತಗುಲಿದ ವೆಚ್ಚ - 4,12,650/- (ನಾಲ್ಕು ಲಕ್ಷದ ಹನ್ನೆರಡು ಸಾವಿರದ ಆರುನೂರ ಐವತ್ತು ರೂಪಾಯಿ ಮಾತ್ರ)ಗಳಿಗೆ ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆ ನೀಡಿತು.** | | |
| ವಿಷಯ 10 | **'ಸಂಸ್ಕೃತ ಗ್ರಂಥ ಪುರಸ್ಕಾರ-2017' ಮತ್ತು 'ಸಂಸ್ಕೃತ ಗ್ರಂಥ ಪುರಸ್ಕಾರ-2018' ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2010-11ನೇ ಸಾಲಿನಿಂದ 'ಗ್ರಂಥ ಪುರಸ್ಕಾರ' ಯೋಜನೆಯನ್ನು ಹಮ್ಮಿಕೊಂಡು, ಉತ್ತಮ ಸಂಸ್ಕೃತ ಗ್ರಂಥಗಳಿಗೆ ಪುರಸ್ಕಾರವನ್ನು ನೀಡುತ್ತಾ ಬಂದಿದೆ. ಈ ಪುರಸ್ಕಾರವು ಪ್ರಶಸ್ತಿ ಫಲಕ, ಶಾಲು ಮತ್ತು ರೂ. 10,000/- ಗೌರವಧನವನ್ನು ಒಳಗೊಂಡಿದೆ. ಪ್ರಸ್ತುತ, **'ಗ್ರಂಥ ಪುರಸ್ಕಾರ-2016'** ಮತ್ತು **'ಸಂಸ್ಕೃತ ಗ್ರಂಥ ಪುರಸ್ಕಾರ-2018'** ಕ್ಕೆ ಕೆಳಕಂಡ ವಾಙ್ಮಯ ಪ್ರಕಾರಗಳಲ್ಲಿ ಕಳೆದ ಐದು ವರ್ಷಗಳಲ್ಲಿ ಪ್ರಕಟವಾದ ಗ್ರಂಥಗಳನ್ನು ಆಹ್ವಾನಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.<br>**ವಾಙ್ಮಯ ಪ್ರಕಾರಗಳು:**<br>1. ಸಂಸ್ಕೃತ ಕಾದಂಬರೀ / ಕಥಾಸಾಹಿತ್ಯ<br>2. ಸಂಸ್ಕೃತ ಗದ್ಯ / ಪದ್ಯ / ಕಾವ್ಯ / ನಾಟಕ ಸಾಹಿತ್ಯ<br>3. ಸಂಸ್ಕೃತ ಗ್ರಂಥ ಸಂಪಾದನಾ ಸಾಹಿತ್ಯ<br>4. ಸಂಸ್ಕೃತ ಪ್ರಬಂಧ ವಿಮರ್ಶನ ಸಾಹಿತ್ಯ / ವಿಜ್ಞಾನ ಸಾಹಿತ್ಯ<br>5. ಇತರ ಭಾಷೆಗಳಿಂದ ಸಂಸ್ಕೃತಕ್ಕೆ ಅನುವಾದ<br>6. ಸಂಸ್ಕೃತ ಶಾಸ್ತ್ರೀಯ ಗ್ರಂಥದ ಕನ್ನಡ ಅನುವಾದ<br>7. ಸಂಸ್ಕೃತದ ಅತ್ಯುತ್ತಮ ಸಂಶೋಧನಾ ಪ್ರಬಂಧ (ಪಿಎಚ್.ಡಿ.-ವಿದ್ಯಾವಾರಿಧಿ)<br>8. ಅತ್ಯುತ್ತಮ ಇಂಡಾಲಜಿ ವಿಮರ್ಶಗ್ರಂಥ ಅಥವಾ ಲೇಖನ ಸಂಗ್ರಹ<br>9. ಸಂಸ್ಕೃತ ಸಂಶೋಧನಾ ವಿದ್ಯಾರ್ಥಿಗಳ ಅತ್ಯುತ್ತಮ ಸಂಶೋಧನ ಲೇಖನ (ಸುದೀರ್ಘ-ಕನಿಷ್ಠ 50 ಪುಟಗಳು) ಶಿಕ್ಷಕರ ಅತ್ಯುತ್ತಮ ಸಂಸ್ಕೃತ ಸಂಶೋಧನಾ ಲೇಖನ | | |
| ನಿರ್ಣಯ | **'ಗ್ರಂಥ ಪುರಸ್ಕಾರ-2016' ಮತ್ತು 'ಸಂಸ್ಕೃತ ಗ್ರಂಥ ಪುರಸ್ಕಾರ-2018' ನ್ನು ನಡೆಸಲು ಸಭೆಯು ಒಪ್ಪಿದೆ.** | | |
| **ಅಧ್ಯಕ್ಷರ ಅಪ್ಪಣೆ ಮೇರೆಗೆ** | | | |
| ವಿಷಯ 01 | **ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಹಿಂಭಾಗದಲ್ಲಿರುವ ಹಳೆಯ ಕಟ್ಟಡವನ್ನು ಕೆಡವುದಕ್ಕೆ ಘಟನೋತ್ತರ ಅನುಮತಿ ನೀಡುವ ಬಗ್ಗೆ,**<br>ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ ವಿಶ್ವವಿದ್ಯಾಲಯಕ್ಕೆ ಬಿಡುಗಡೆಯಾಗಿರುವ ಅನುದಾನವನ್ನು ಉಪಯೋಗಿಸಿಕೊಂಡು ಘಟಕ ಕಾಲೇಜು ಆವರಣದಲ್ಲಿ ವಿದ್ಯಾರ್ಥಿನಿಲಯವನ್ನು ನಿರ್ಮಿಸಲು ಈಗಾಗಲೇ ಒಪ್ಪಿಗೆ ಪಡೆಯಲಾಗಿದೆ. ಬೆಂಗಳೂರಿನ ಚಾಮರಾಜೇಂದ್ರ ಸಂಸ್ಕೃತ ಕಾಲೇಜು ಆವರಣದಲ್ಲಿರುವ | | |

| | |
|---|---|
| | ಹಳೆಯ ಕಟ್ಟಡವನ್ನು ಕೆಡವಿ ಆ ಸ್ಥಳದಲ್ಲಿ ಹೊಸದಾಗಿ 2 ಅಂತಸ್ತಿನ ಕಟ್ಟಡವನ್ನು ನಿರ್ಮಿಸಲು 48ನೇ ಪ್ರಶಾಸನ ಸಮಿತಿ ಸಭೆಯಲ್ಲಿ ಒಪ್ಪಿಗೆ ಪಡೆಯಲಾಗಿತ್ತು. ಈ ಹಿನ್ನೆಲೆಯಲ್ಲಿ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಹಿಂಭಾಗದಲ್ಲಿರುವ ಹಳೆಯ ಕಟ್ಟಡವನ್ನು ಕೆಡವಲು ಕೆಆರ್‌ಡಿಎಲ್‌ಗೆ ಆದೇಶ ನೀಡಲಾಗಿದೆ ಮತ್ತು ಇವರಿಗೆ 8.76 ಲಕ್ಷರೂಗಳನ್ನು ಪಾವತಿ ಮಾಡಲಾಗಿದೆ. ಇದಕ್ಕೆ ಘಟನೋತ್ತರ ಅನುಮತಿ ಕೋರಿ ಪ್ರಶಾಸನ ಸಮಿತಿಯಲ್ಲಿ ಮಂಡಿಸಿದೆ. |
| ನಿರ್ಣಯ | **ರೂ 8.76 ಲಕ್ಷ ರೂ ಪಾವತಿಸಿದ್ದಕ್ಕೆ ಸಭೆಯು ಘಟನೋತ್ತರ ಅನುಮತಿ ನೀಡಿತು.** |

ಪ್ರೊ. ವಿ. ಗಿರೀಶ್ ಚಂದ್ರ
**ಕುಲಸಚಿವರು (ಪ್ರಭಾರ)**

ಪ್ರೊ. ಪದ್ಮಾ ಶೇಖರ್
**ಅಧ್ಯಕ್ಷರು**